## ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಡಿ.ಎಸ್. ಅರುಣ್ ಇವರ ನಿಯಮ 72ರಲ್ಲಿ ಪ್ರಸ್ತಾಪಿಸಿರುವ ವಿಷಯದ ಕುರಿತು.

**ವಿಷಯ:**

ಕುವೆಂಪು ವಿಶ್ವವಿದ್ಯಾಲಯದಲ್ಲಿ ಎಸ್.ಸಿ.ಪಿ-ಟಿ.ಎಸ್.ಪಿ. ಅನುದಾನವನ್ನು ಬಳಸಿಕೊಂಡು ಸ್ಮಾರ್ಟ್ ಕ್ಲಾಸ್‌ಗಳನ್ನು ನಿರ್ಮಿಸಿರುವ ಸಂಬಂಧ ನಡೆದಿರುವ ಭಾರೀ ಮೊತ್ತದ ಅಕ್ರಮವನ್ನು ಹಾಗೂ ಕುವೆಂಪು ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಅಕ್ರಮಗಳ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:**

ಕುವೆಂಪು ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಅನುಕೂಲಕ್ಕಾಗಿ ಸ್ಮಾರ್ಟ್ ಕ್ಲಾಸ್ ರೂಮ್ ಸೌಲಭ್ಯವನ್ನು ಒಟ್ಟು 45 ವಿಭಾಗಗಳಿಗೆ ಅಳವಡಿಸಲು ಒಟ್ಟು ಮೊತ್ತ ರೂ. 09.00 ಕೋಟಿ ಅನುದಾನಕ್ಕಾಗಿ ಪ್ರಸ್ತಾವನೆ ಸಲಿಸಲಾಗಿತ್ತು. ಸರ್ಕಾರವು ಎಸ್.ಸಿ.ಪಿ., ಟಿ.ಎಸ್.ಪಿ. ಅನುದಾನದಡಿ ವಿಶ್ವವಿದ್ಯಾಲಯದಲ್ಲಿನ ಎಸ್ಸಿ/ಎಸ್ಟಿ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸ್ಮಾರ್ಟ್ ಕ್ಲಾಸ್ ರೂಮ್ ಸೌಲಭ್ಯವನ್ನು ಅಳವಡಿಸಲು ಸಮಾಜ ಕಲ್ಯಾಣ ಇಲಾಖೆಯ ಆದೇಶ ಸಂಖ್ಯೆ:ಸಕಇ/16/ಪಕವಿ/2022, ದಿನಾಂಕ:14.01.2022ರಲ್ಲಿ ಒಟ್ಟು ರೂ. 5.00 ಕೋಟಿ ಅನುದಾನವನ್ನು ಮಂಜೂರು ಮಾಡಿ ಅದರಲ್ಲಿ ಶೇಕಾಡ 25%. ರಷ್ಟು ಅನುದಾನವನ್ನು ಮೊದಲ ಕಂತಾಗಿ ರೂ. 1.25 ಕೋಟಿಗಳನ್ನು ಬಿಡುಗಡೆ ಮಾಡಿರುತ್ತದೆ. ಮುಂದುವರೆದು, ಉಳಿಕೆ ಮೊತ್ತ ರೂ. 3.75ಕೋಟಿಗಳಲ್ಲಿ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಆದೇಶ ಸಂಖ್ಯೆ: ಸಕನಿ/ಪಜಾಉಯೋ/ಸಿಆರ್-1058974/2022-23, ದಿನಾಂಕ: 06.04.2023ರ ಆದೇಶದಲ್ಲಿ ಉಳಿಕೆ ಮೂತ್ತ ರೂ.3.00 ಕೋಟಿಗಳ ಬಿಡುಗಡೆ ಮಾಡಲಾಗಿರುತ್ತದೆ.

ಸದರಿ ಅನುದಾನವನ್ನು ಬಳಸಿಕೊಂಡು ಸರ್ಕಾರದ ಆದೇಶದಲ್ಲಿನ ಷರತ್ತುಗಳನುಸಾರ ತಾಂತ್ರಿಕ ಪರಿಣಿತರ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಿ ಸದರಿ ಸಮಿತಿಯ ತಾಂತ್ರಿಕ ಸಲಹೆ ಮತ್ತು ಶಿಫಾರಸ್ಸುಗಳನ್ವಯ ಹಾಗೂ ವಿಶ್ವವಿದ್ಯಾಲಯದ ಖರೀದಿ ಸಮಿತಿ ಮತ್ತು ಸಿಂಡಿಕೇಟ್ ಅನುಮೋದನೆಯೊಂದಿಗೆ ಸರ್ಕಾರದ ಅಂಗ ಸಂಸ್ಥೆಯಾದ ಮೇ|| ಕಿಯೋನಿಕ್ಸ್ ಸಂಸ್ಥೆ, ಬೆಂಗಳೂರು- ಇವರ ವತಿಯಿಂದ ಪೂರಕವಾದ ಪ್ರಸ್ತಾವನೆಗಳನ್ನು ಪಡೆದು ತಲಾ ಒಂದು ವಿಭಾಗಕ್ಕೆ ರೂ. 19,98,819-00ಗಳ ವೆಚ್ಚದಲ್ಲಿ ಒಟ್ಟು 25 ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಅಳವಡಿಕೆ ಕಾರ್ಯವನ್ನು ಕೈಗೊಳ್ಳಲಾಗಿದೆ.

ಸದರಿ ಅಳವಡಿಕೆ ಕಾರ್ಯವನ್ನು ಅಳವಡಿಸಿ, ಪೂರಕವಾದ ತರಬೇತಿಯನ್ನು ವಿಶ್ವವಿದ್ಯಾಲಯದ ಸಂಬಂಧಿಸಿದ ವಿಭಾಗಗಳ ಅಧ್ಯಾಪಕರು, ಅತಿಥಿ ಉಪನ್ಯಾಸಕರು ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ನೀಡಲಾಗಿದ್ದು, ಎಲ್ಲಾ ವಿಭಾಗಗಳಲ್ಲೂ ಯಶಸ್ವಿಯಾಗಿ ಬಳಸಿಕೊಳ್ಳಲಾಗುತ್ತಿದೆ. ಸದರಿ ಯೋಜನೆಯ ಅಳವಡಿಕೆ ಕಾರ್ಯವನ್ನು ವಿಶ್ವವಿದ್ಯಾಲಯದಲ್ಲಿ ರಚಿಸಲಾಗಿರುವ ತಾಂತ್ರಿಕ ಪರಿಣಿತ ಸದಸ್ಯರ ಸಮಿತಿಯ ವತಿಯಿಂದ ಪರಿಶೀಲಿಸಿ, ಅಳವಡಿಕೆಯ ಕುರಿತ ವೆಚ್ಚಕ್ಕೆ ಸಂಬಂಧಿಸಿದಂತೆ ಅನುದಾನದ ಲಭ್ಯತೆಯ ಆಧಾರದ ಮೇಲ್ಕೆ ಆಳವಡಿಕೆ ಸಂಸ್ಥೆಯಾದ ಮೇ|| ಕಿಯೋನಿಕ್ಸ್ ಸಂಸ್ಥೆಗೆ ಬಿಡುಗಡೆಯಾದ ಮೊತ್ತ ರೂ. 4.25 ಕೋಟಿ ರೂಗಳಲ್ಲಿ ರೂ. 2,99,82,291-00ಗಳನ್ನು ಸಿಂಡಿಕೇಟ್ ಸಮಿತಿಯ ಅನುಮೋದನೆಯೊಂದಿಗೆ ಇದುವರೆಗೂ ಪಾವತಿಸಲಾಗಿದೆ.

...2

ಮುಂದುವರೆದು ಸದರಿ ಯೋಜನೆ ಅಳವಡಿಕೆಯ ಕುರಿತಂತೆ, ಸರ್ಕಾರಕ್ಕೆ ಬಂದ ದೂರುಗಳ ಆಧಾರದ ಮೇಲೆ ಆಯುಕ್ತರು ಸಮಾಜ ಕಲ್ಯಾಣ ಇಲಾಖೆ ಬೆಂಗಳೂರು, ಇವರ ಆದೇಶದ ಮೇರೆಗೆ ಉಪ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಶಿವಮೊಗ್ಗ ಇವರ ನೇತೃತ್ವದಲ್ಲಿ ತನಿಖಾ ತಂಡ ವಿಶ್ವವಿದ್ಯಾಲಯಕ್ಕೆ ಖುದ್ದು ಭೇಟಿ ನೀಡಿ ಭೌತಿಕವಾಗಿ ಸದರಿ ಸೌಲಭ್ಯಗಳ ಆಳವಡಿಕೆಯನ್ನು ಪರಿಶೀಲಿಸಿ, ಸಂಪೂರ್ಣ ಛಾಯ ಚಿತ್ರಗಳೊಂದಿಗೆ ಪೂರ್ಣಪ್ರಮಾಣದ ತೃಪ್ತಿಕರವಾದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಮುಂದುವರೆದು, ಸದರಿ ಸೌಲಭ್ಯದ ಅಳವಡಿಕೆಗೆ ಸರ್ಕಾರವು ಒಟ್ಟು ರೂ.5.00 ಕೋಟಿ ಅನುದಾನವನ್ನು ಮಂಜೂರು ಮಾಡಿದ್ದು, ಅದರಲ್ಲಿ 4.25 ಕೋಟಿಗಳನ್ನು ಮಾತ್ರ ಬಿಡುಗಡೆ ಮಾಡಿರುತ್ತದೆ. ಸದರಿ ಅನುದಾನದ ಲಭ್ಯತೆಯನುಸಾರ ಹಂತ ಹಂತವಾಗಿ ಸದರಿ ಯೋಜನೆಯನ್ನು ಪೂರ್ಣಗೊಳಿಸಲಾಗುವುದು. ಮುಂದುವರೆದು, ಸರ್ಕಾರದ ಆದೇಶದಲ್ಲಿನ ಷರತ್ತಿಗಳಿಗನುಸಾರವಾಗಿ ತಾಂತ್ರಿಕ ಸಮಿತಿಯ ಸಲಹೆ ಮತ್ತು ಶಿಫಾರಸ್ಸುಗಳನ್ವಯ ಮತ್ತು ಸರ್ಕಾರದ ಅಂಗ ಸಂಸ್ಥೆಯಾದ ಮೆ|| ಕಿಯೋನಿಕ್ಸ್ ಸಂಸ್ಥೆ, ಬೆಂಗಳೂರು ಇವರ ವತಿಯಿಂದ ಸ್ಮಾರ್ಟ್ ಕ್ಲಾಸ್ ರೂಂ ಸೌಲಭ್ಯ ಅಳವಡಿಸಲಾಗುತ್ತಿದ್ದು. ಯಾವುದೇ ರೀತಿಯ ಅನುದಾನದ ದೂರುಪಯೋಗ ವಾಗಿರುವುದಿಲ್ಲ.

ಮುಂದುವರೆದು ಕುವೆಂಪು ವಿಶ್ವವಿದ್ಯಾಲಯದ ಕುಲಪತಿ, ಕುಲಸಚಿವ(ಮೌಲ್ಯಮಾಪನ), ದೂರ ಶಿಕ್ಷಣ ನಿರ್ದೇಶಕರ ವಿರುದ್ಧ, ಮಾನ್ಯ ಗೌರವಾನ್ವಿತ ರಾಜ್ಯಪಾಲರಿಂದ ಸ್ವೀಕೃತವಾಗಿರುವ ದೂರುಗಳು ಹಾಗೂ ಸರ್ಕಾರದ ಹಂತದಲ್ಲಿ ಸ್ವೀಕೃತವಾಗಿರುವ ಎಲ್ಲಾ ದೂರುಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ವರದಿ ನೀಡಲು ನಿವೃತ್ತ ನ್ಯಾಯಾಧೀಶರಾದ ಶ್ರೀ ರವೀಂದ್ರನಾಥ್ ಹೆಚ್.ಬಿ ಇವರ ಅಧ್ಯಕ್ಷತೆಯಲ್ಲಿ ಪ್ರಾಥಮಿಕ ಸಮಿತಿಯನ್ನು ರಚಿಸಲಾಗಿರುತ್ತದೆ. ಸದರಿ ಸಮಿತಿಯಿಂದ ವರದಿಯನ್ನು ನಿರೀಕ್ಷಿಸಲಾಗುತ್ತಿದೆ.

********

ಸಂಖ್ಯೆ: ಇಡಿ 45 ಯುಎಸ್‌ವಿ 2023

(ಡಾ: ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು